SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar

UNIVERSITY LIBRARY & LEARNING RESOURCE CENTRE

ವಿಜಯವಾಣಿ

Online Newspaper Clipping Service
Dtd- wednesday, 4th, March- 2020

Page No.05

ಶ್ರವಣ ದಿನಾಚರಣೆಯಲ್ಲಿ ವಾಕ್ ಮತ್ತು ಶ್ರವಣ ತಜ್ಞ ಡಾ.ಜಯರಾಮ್ ಮಾಹಿತಿ

# ವೈಜ್ಞಾನಿಕ ಚಿಕಿತ್ಸೆಯಿಂದ ಸಮಸ್ಯೆಗೆ ಪರಿಹಾರ

■ ವಿಜಯವಾಣಿ ಸುದ್ದಿಜಾಲ ಕೋಲಾರ

ವಾಕ್ ಮತ್ತು ಶ್ರವಣ ದೋಷಗಳಿಗೆ ವೈಜ್ಞಾನಿಕ ಚಿಕಿತ್ಸೆ ಹಾಗೂ ಆಧುನಿಕ ಸಾಧನಗಳ ಬಳಕೆ ಮೂಲಕ ಪರಿಹಾರ ಕಂಡುಕೊಳ್ಳಬಹುದು ಎಂದು ವಾಕ್ ಮತ್ತು ಶ್ರವಣ ತಜ್ಞ ಡಾ.ಜಯರಾಮ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಶ್ರೀ ದೇವರಾಜ್ ಅರಸ್ ಉನ್ನತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಯ ವಾಕ್ ಶ್ರವಣ ವಿಭಾಗದಿಂದ ಮಂಗಳವಾರ ಆಯೋಜಿಸಿದ್ದ ವಾಕ್ ಶ್ರವಣ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿ, ಸಮಸ್ಯೆ ಕಾಣಿಸಿಕೊಂಡ ತಕ್ಷಣ ವೈದ್ಯರ ಬಳಿ ಚಿಕಿತ್ಸೆ ಪಡೆಯುವುದು ಸೂಕ್ತ ಎಂದರು.

» **ಜಗತ್ತಿನ 46 ಕೋಟಿ ಜನರಲ್ಲಿ ಶೇ 6.1 ಮಂದಿಗೆ ಶ್ರವಣ ದೋಷ**

ವಿಶ್ವ ಆರೋಗ್ಯ ಸಂಸ್ಥೆಯ ಸರ್ವೇ ಪ್ರಕಾರ ಜಗತ್ತಿನ 46 ಕೋಟಿ ಜನರಲ್ಲಿ ಶೇ 6.1 ಮಂದಿಗೆ ಶ್ರವಣ ದೋಷವಿದೆ. ಈ ಕುರಿತು ಮುಂಜಾಗ್ರತ ಕ್ರಮ ಕೈಗೊಳ್ಳದಿದ್ದಲ್ಲಿ ಶ್ರವಣ ದೋಷ ಇರುವವರ ಸಂಖ್ಯೆ 2030ನೇ ವರ್ಷಕ್ಕೆ 63 ಕೋಟಿಗೆ ಏರಿಕೆಯಾಗಲಿದೆ ಎಂದು ಕಳವಳ ವ್ಯಕ್ತ ಪಡಿಸಿದರು.




ಕೋಲಾರದಲ್ಲಿ ಆಯೋಜಿಸಿದ್ದ ವಾಕ್ ಶ್ರವಣ ದಿನಾಚರಣೆಯಲ್ಲಿ ವಾಕ್ ಮತ್ತು ಶ್ರವಣ ತಜ್ಞ ಡಾ.ಜಯರಾಮ್ ಮಾತನಾಡಿದರು. ಶ್ರವಣ ತಜ್ಞೆ ಡಾ.ಅಪೂರ್ವಾ ಇತರರು ಹಾಜರಿದ್ದರು.

ಅಧುನಿಕ ತಂತ್ರಜ್ಞಾನದಿಂದ ಸಮಸ್ಯೆಗಳಿಗೆ ಪರಿಹಾರಗಳಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಉಚಿತ ತಪಾಸಣೆ ನಡೆಸಲು ದೇವರಾಜ್ ಅರಸ್ ಉನ್ನತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆ ಮುಂದಾಗಿದ್ದು, ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ರಾಜ್ಯ ಸರಕು ಖರೀದಿ ಮತ್ತು ಮಾರಾಟಗಾರರ ಸಹಕಾರ ಸಂಘದ ನಿರ್ದೇಶಕ ವಿ.ಮುನಿರಾಜು ಮಾತನಾಡಿ, ಬದಲಾಗುತ್ತಿರುವ ಜೀವನ ಶೈಲಿಯಿಂದ ಮನುಷ್ಯ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾನೆ, ಇದರ ನಿರ್ಮೂಲನೆಗೆ ಜಾಗೃತಿ ಕಾರ್ಯಕ್ರಮ ನಡೆಯಬೇಕು ಎಂದರು.

ಶ್ರವಣ ತಜ್ಞೆ ಡಾ.ಅಪೂರ್ವ ಮಾತನಾಡಿ, ಕೇಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಭಾಗವು ಅದರದೇ ಆದ ನಿರ್ದಿಷ್ಟ ಕಾರ್ಯ ನಿರ್ವಹಿಸುತ್ತವೆ. ಕಿವಿಯ ಮೇಲೆ ಬಲವಾದ ಏಟು ಬೀಳಬಾರದು, ಜೋರು ಶಬ್ದಗಳಿಂದ ದೂರ ಇರಬೇಕು. ಯಾವುದೇ ಚೂಪಾದ ವಸ್ತುಗಳನ್ನು ಕಿವಿಯ ನಾಳಕ್ಕೆ ಹಾಕಬಾರದು. ಕಿವಿಯ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ವಾಕ್ ತಜ್ಞ ಅಭಿಜಿತ್, ಸಾರ್ವಜನಿಕ ಸಂಪರ್ಕಾಧಿಕಾರಿ ಸುಮಂತ್ ಹಾಜರಿದ್ದರು.

www.vijaykarnataka.com ವಿಜಯ ಕರ್ನಾಟಕ

# ಶ್ರವಣದೋಷಕ್ಕೆ ವೈಜ್ಞಾನಿಕ ಚಿಕಿತ್ಸೆ ಅಗತ್ಯ



ಕೋಲಾರ ಪತ್ರಕರ್ತರ ಭವನದಲ್ಲಿ ದೇವರಾಜ್ ಅರಸ್ ಉನ್ನತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಯ ವಾಕ್ ಶ್ರವಣ ವಿಭಾಗದಿಂದ ಮಂಗಳವಾರ ನಡೆದ ವಾಕ್ ಶ್ರವಣ ದಿನಾಚರಣೆಯಲ್ಲಿ ಡಾ.ಜಯರಾಮ್ ಮಾತನಾಡಿದರು.

**ವಿಕ ಸುದ್ದಿಲೋಕ** ಕೋಲಾರ

ವೈಜ್ಞಾನಿಕ ಚಿಕಿತ್ಸೆಯಿಂದ ವಾಕ್ ಮತ್ತು ಶ್ರವಣ ದೋಷ ನಿವಾರಣೆ ಸಾಧ್ಯ. ಹೀಗಾಗಿ ಸಮಸ್ಯೆ ಕಾಣಿಸಿಕೊಂಡ ಕೂಡಲೆ ಚಿಕಿತ್ಸೆ ಪಡೆದುಕೊಳ್ಳುವುದು ಸೂಕ್ತ ಎಂದು ವಾಕ್ ಶ್ರವಣ ತಜ್ಞ ಡಾ.ಜಯರಾಮ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ದೇವರಾಜ್ ಅರಸ್ ಉನ್ನತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಯ ವಾಕ್ ಶ್ರವಣ ವಿಭಾಗದಿಂದ ಮಂಗಳವಾರ ವಾಕ್ ಶ್ರವಣ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಶ್ವ ಸಂಸ್ಥೆ ಮಾ.3 ವಾಕ್ ಶ್ರವಣ ದಿನಾಚರಣೆ ಆಚರಿಸಲು ಘೋಷಿಸಿದೆ. ಸಂಸ್ಥೆಯ ವರದಿ ಪ್ರಕಾರ ಜಗತ್ತಿನಲ್ಲಿ 46 ಕೋಟಿ ಮಂದಿ ಶ್ರವಣ ದೋಷದಿಂದ ಬಳಲುತ್ತಿದ್ದು, 2030ರವೇಳೆಗೆ 63ಕೋಟಿ ಮಂದಿ ದೋಷಕ್ಕೆ ತುತ್ತಾಗುತ್ತಾರೆ ಎಂದು ಅಂದಾಜಿಸಲಾಗಿದೆ ಎಂದು ಹೇಳಿದರು.

ರಾಜ್ಯ ಸರಕು ಖರೀದಿ ಮತ್ತು ಮಾರಾಟಗಾರರ ಸಹಕಾರ ಸಂಘದ ನಿರ್ದೇಶಕ ವಿ.ಮುನಿರಾಜು ಮಾತನಾಡಿ, ಬದಲಾಗುತ್ತಿರುವ ಜೀವನ ಶೈಲಿಯಿಂದಲೇ ಮಾನವನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಈ ಬಗ್ಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದರು.

**ಅರಿವು ಕೊರತೆ:** ಹುಟ್ಟಿನಿಂದ ಸಂಭವಿಸುವ ಅಂಗವಿಕಲ, ವಾಕ್, ಶ್ರವಣದೋಷಕ್ಕೆ ಪರಿಹಾರ ಸಿಗುತ್ತದೆ. ಅರಿವು ಕೊರತೆಯಿಂದ ಕೆಲವರು ಆರೋಗ್ಯದ ಮೇಲೆ ಪರಿಣಾಮ ಬೀರುವ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮೀಣ ಭಾಗದಿಂದ ಆರೋಗ್ಯ ಶಿಬಿರಗಳು ನಡೆದಾಗ ಸೂಕ್ತ ಚಿಕಿತ್ಸೆ ಕಲ್ಪಿಸಬಹುದು ಎಂದು ತಿಳಿಸಿದರು.

ಶ್ರವಣ ತಜ್ಞೆ ಅಪೂರ್ವ ಮಾತನಾಡಿ, ಕಿವಿಯಲ್ಲಿ ಪ್ರಮುಖವಾಗಿ 3 ಭಾಗಗಳಿದ್ದು, ಹೊರ, ಮಧ್ಯ ಮತ್ತು ಒಳ ಕಿವಿ ಇರುತ್ತದೆ. ಒಳ ಕಿವಿಯಿಂದ ಶಬ್ದ ಕಿವಿಯ ನರಗಳು ಮೆದುಳಿಗೆ ತಲುಪುತ್ತವೆ. ಕೇಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಪ್ರತಿ ಭಾಗವು ಅದರದೇ ಆದ ನಿರ್ದಿಷ್ಟ ಕಾರ್ಯ ನಿರ್ವಹಿಸುತ್ತವೆ ಎಂದರು.

ಕಿವಿಯ ಮೇಲೆ ಬಲವಾದ ಏಟು ಬೀಳಬಾರದು, ಜೋರಾದ ಶಬ್ದಗಳಿಂದ ದೂರ ಇರಬೇಕು. ಚೂಪಾದ ವಸ್ತುಗಳನ್ನು ಕಿವಿಯ ನಾಳಕ್ಕೆ ಹಾಕಬಾರದು ಎಂದು ಸಲಹೆ ನೀಡಿದರು.

ವಾಕ್ ತಜ್ಞ ಅಭಿಜಿತ್, ಸಾರ್ವಜನಿಕ ಸಂಪರ್ಕಾಧಿಕಾರಿ ಸುಮಂತ್ ಇದ್ದರು.

# ಹಣ– ಆಸ್ತಿಗಿಂತ ಆರೋಗ್ಯ ಮುಖ್ಯ

## ಕೋಲಾರದಲ್ಲಿ ವಾಕ್ ಶ್ರವಣ ತಜ್ಞ ಜಯರಾಮ್ ಕಿವಿಮಾತು

ಪ್ರಜಾವಾಣಿ ವಾರ್ತೆ

ಕೋಲಾರ: 'ವೈಜ್ಞಾನಿಕ ಚಿಕಿತ್ಸೆಯಿಂದ ವಾಕ್ ಮತ್ತು ಶ್ರವಣ ದೋಷ ನಿವಾರಣೆ ಸಾಧ್ಯ' ಎಂದು ವಾಕ್ ಶ್ರವಣ ತಜ್ಞ ಡಾ.ಜಯರಾಮ್ ತಿಳಿಸಿದರು.

ದೇವರಾಜ ಅರಸು ಉನ್ನತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಯ ವಾಕ್ ಶ್ರವಣ ವಿಭಾಗವು ಇಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಾಕ್ ಶ್ರವಣ ದಿನಾಚರಣೆ ಉದ್ಘಾಟಿಸಿ ಮಾತನಾಡಿ, 'ಆರೋಗ್ಯ ಸಮಸ್ಯೆ ಕಾಣಿಸಿಕೊಂಡ ತಕ್ಷಣವೇ ವೈದ್ಯರ ಬಳಿ ತೆರಳಿ ಚಿಕಿತ್ಸೆ ಪಡೆಯುವುದು ಸೂಕ್ತ' ಎಂದು ಸಲಹೆ ನೀಡಿದರು.

'ವಿಶ್ವ ಸಂಸ್ಥೆಯು ಮಾರ್ಚ್ 3ರಂದು ವಾಕ್‌ಶ್ರವಣ ದಿನ ಆಚರಿಸಲು ಘೋಷಣೆ ಮಾಡಿದೆ. ವಿಶ್ವ ಸಂಸ್ಥೆ ವರದಿ ಪ್ರಕಾರ ಜಾಗತಿಕವಾಗಿ 46 ಕೋಟಿ ಮಂದಿ ಶ್ರವಣ ದೋಷದಿಂದ ಬಳಲುತ್ತಿದ್ದಾರೆ. 2030ರ ವೇಳೆಗೆ 63 ಕೋಟಿ ಮಂದಿ ಶ್ರವಣ ದೋಷಕ್ಕೆ ತುತ್ತಾಗುತ್ತಾರೆ ಎಂದು ಅಂದಾಜಿಸಲಾಗಿದೆ' ಎಂದು ಹೇಳಿದರು.

'ಹಣ ಸಂಪಾದನೆ, ಆಸ್ತಿ ಗಳಿಕೆಗಿಂತ ಆರೋಗ್ಯ ಮುಖ್ಯ. ಕೋಟಿಗಟ್ಟಲೇ ಹಣ, ಆಸ್ತಿ ಸಂಪಾದಿಸಿ ಆರೋಗ್ಯವೇ ಸರಿ ಇಲ್ಲದಿದ್ದರೆ ಪ್ರಯೋಜನವಿಲ್ಲ. ಆದ ಕಾರಣ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು. ಸಣ್ಣ ಪುಟ್ಟ ಆರೋಗ್ಯ ಸಮಸ್ಯೆ ಎದುರಾದರೂ ನಿರ್ಲಕ್ಷಿಸದೆ ಚಿಕಿತ್ಸೆ ಪಡೆಯಬೇಕು. ಪೌಷ್ಟಿಕ ಆಹಾರ ಸೇವಿಸಬೇಕು ಮತ್ತು ದುಶ್ಚಟಗಳಿಂದ ದೂರವಿರಬೇಕು' ಎಂದು ಕಿವಿಮಾತು ಹೇಳಿದರು.

ಯಾಂತ್ರಿಕ ಜೀವನ: 'ಬದಲಾಗುತ್ತಿರುವ ಜೀವನ ಶೈಲಿ ಹಾಗೂ ಆಹಾರ ಪದ್ಧತಿಯಿಂದ ಮನುಷ್ಯ ಗಂಭೀರ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾನೆ. ಯಾಂತ್ರಿಕ ಜೀವನದಿಂದ ಮಾನಸಿಕ ಒತ್ತಡ ಹೆಚ್ಚಿ ಜನ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಜನರ ಆಹಾರ ಕ್ರಮ ಮತ್ತು ಜೀವನ ಶೈಲಿ ಬದಲಾದರೆ ರೋಗಮುಕ್ತ ಬದುಕು ಸಾಗಿಸಬಹುದು' ಎಂದು ರಾಜ್ಯ ಸರಕು ಖರೀದಿ ಮತ್ತು ಮಾರಾಟಗಾರರ ಸಹಕಾರ ಸಂಘದ ನಿರ್ದೇಶಕ ವಿ.ಮುನಿರಾಜು ಅಭಿಪ್ರಾಯಪಟ್ಟರು.

'ಅಂಗವೈಕಲ್ಯ, ವಾಕ್ ಮತ್ತು ಶ್ರವಣ ದೋಷಕ್ಕೆ ವೈದ್ಯಕೀಯ ಪರಿಹಾರವಿದೆ. ಆದರೆ, ಕೆಲವರು ಅರಿವಿನ ಕೊರತೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಆರೋಗ್ಯ ಶಿಬಿರ ನಡೆಸಬೇಕು. ಅತಿಯಾಗಿ ಮೊಬೈಲ್ ಬಳಸುವುದರಿಂದ ಶ್ರವಣ ದೋಷ ಎದುರಾಗುವ ಸಾಧ್ಯತೆಯಿದೆ. ಆದ್ದರಿಂದ ಮೊಬೈಲ್ ಬಳಕೆ ಸಾಧ್ಯವಾದಷ್ಟು ಕಡಿಮೆ ಮಾಡಬೇಕು' ಎಂದರು.

ಆರೋಗ್ಯ ಕಾಪಾಡಿಕೊಳ್ಳಿ: 'ಕಿವಿಯಲ್ಲಿ ಪ್ರಮುಖವಾಗಿ 3 ಭಾಗಗಳಿದ್ದು, ಹೊರ, ಮಧ್ಯ ಮತ್ತು ಒಳ ಕಿವಿಯಿರುತ್ತದೆ. ಒಳ ಕಿವಿಯಿಂದ ಶಬ್ದವು ನರಗಳ ಮೂಲಕ ಮಿದುಳಿಗೆ ತಲುಪುತ್ತದೆ. ಕೇಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಪ್ರತಿ ಭಾಗವು ಅದರದೇ ಆದ ನಿರ್ದಿಷ್ಟ ಕಾರ್ಯ ನಿರ್ವಹಿಸುತ್ತವೆ. ಕಿವಿ ಮೇಲೆ ಬಲವಾದ ಏಟು ಬೀಳಬಾರದು. ಜೋರು ಶಬ್ದದಿಂದ ದೂರವಿರಬೇಕು. ಚೂಪಾದ ವಸ್ತುಗಳನ್ನು ಕಿವಿಯ ನಾಳಕ್ಕೆ ಹಾಕಬಾರದು. ಕಿವಿಯ ಆರೋಗ್ಯ ಕಾಪಾಡಿಕೊಳ್ಳಬೇಕು' ಎಂದು ಶ್ರವಣ ತಜ್ಞೆ ಡಾ.ಅಪೂರ್ವ ಹೇಳಿದರು.

ವೈದ್ಯ ಡಾ.ಅಭಿಜಿತ್, ದೇವರಾಜ ಅರಸು ಉನ್ನತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆ ಸಾರ್ವಜನಿಕ ಸಂಪರ್ಕಾಧಿಕಾರಿ ಸುಮಂತ್ ಹಾಜರಿದ್ದರು.




ದೇವರಾಜ ಅರಸು ಉನ್ನತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಯು ಕೋಲಾರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಾಕ್ ಶ್ರವಣ ದಿನಾಚರಣೆಯಲ್ಲಿ ವಾಕ್ ಶ್ರವಣ ತಜ್ಞ ಡಾ.ಜಯರಾಮ್ ಮಾತನಾಡಿದರು.

**ಮುಖ್ಯಾಂಶಗಳು**

- ಆರೋಗ್ಯದ ಕಡೆ ಹೆಚ್ಚು ಗಮನಹರಿಸಿ
- ಜೀವನ ಶೈಲಿ– ಆಹಾರ ಪದ್ಧತಿ ಬದಲು
- ಮೊಬೈಲ್ ಬಳಕೆ ಕಡಿಮೆ ಮಾಡಬೇಕು

**ಶ್ರವಣೇಂದ್ರಿಯವು ವ್ಯವಹರಿಸಲು ಮುಖ್ಯವಾದ ಇಂದ್ರಿಯ. ಹಲವು ಕಾರಣದಿಂದ ಶ್ರವಣ ದೋಷ ಉಂಟಾಗುತ್ತದೆ. ಕೆಲವರಿಗೆ ಹುಟ್ಟಿನಿಂದಲೇ ಹಾಗೂ ನಂತರದ ದಿನಗಳಲ್ಲಿ ಈ ದೋಷಕಂಡು ಬರುತ್ತದೆ.**

**ಡಾ.ಅಪೂರ್ವ,** ಶ್ರವಣ ತಜ್ಞೆ

ಕರ್ನಾಟಕ...
(ವಾಣಿಜ್ಯ ತೆರಿ...
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕ...
ಸೇವಾ ತೆರಿಗೆ ಕಛೇರಿ–5, ವಾಣಿಜ್ಯ ತೆರಿಗೆ ...
ಬೆಂಗಳೂರು–560047 ದೂರವಾಣಿ–080...
ಸಂಖ್ಯೆ: ವಾತೆಜಂಆ(ಆ)/ವಿಎಸೇತೆಕ–5/ವಾಹನ/...
ಟೆಂಡರ್
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿ... ಕಛೇರಿ–5, ಬೆಂಗಳೂರು ಇವರ ಕಛೇರಿ... ಕಾರ್ಯನಿರ್ವಹಿಸಲು ಒಟ್ಟು 12 (... ಮಾಲಕರು/ಟ್ರಾವೆಲ್ ಏಜೆನ್ಸಿದಾರರು/ಸಂಸ್ಥೆ ... ಆಧಾರದ ಮೇಲೆ 2015 ಮತ್ತು ನಂತರದ... ನಿಶ್ಚಯಿಸಲಾಗಿದೆ. ದಿನಾಂಕ: 20–02–202... ಸಂಬಂಧಿಸಿದ ವಿವರವಾದ ಷರತ್ತುಗಳನ್ನು ... ದಿನಾಂಕ: 11–03–2020ರ ಸಾಯಂಕಾಲ ... ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿ... ಕಚೇರಿ ಅಥವಾ ವಾಣಿಜ್ಯ ತೆರಿಗೆ ಸಹಾಯಕ ...

ಅಂತರಗಂಗೆ
Antharagange Kannada Daily

04-03-2020

### ಕೋಲಾರದಲ್ಲಿ ವಿಶ್ವ ಶ್ರವಣ ದಿನಾಚರಣೆ

# ಹುಟ್ಟಿದ 48 ಗಂಟೆಗಳಲ್ಲಿ ನವಜಾತ ಶಿಶುಗೆ ಕಿವಿ ಕೇಳಿಸದಿದ್ದರೆ ಉಚಿತ ಪರೀಕ್ಷೆ

## ವಾಕ್ ಮತ್ತು ಶ್ರವಣ ತಜ್ಞ ಡಾ.ಜಯರಾಂ ಹೇಳಿಕೆ




ಅಂತರಗಂಗೆ ಸುದ್ದಿ

ಕೋಲಾರ,ಮಾ.3– ಹುಟ್ಟಿದ 48ಗಂಟೆಗಳಲ್ಲಿ ನವಜಾತಶಿಶುಗೆ ಕಿವಿ ಕೇಳಿಸದಿದ್ದರೆ ಜಾಲಪ್ಪ ಆಸ್ಪತ್ರೆಯಲ್ಲಿ ಸಂಪೂರ್ಣವಾದ ಪರೀಕ್ಷೆ ಉಚಿತವಾಗಿ ನಡೆಸಲಾಗುವುದು ಎಂದು ಶ್ರೀ ದೇವರಾಜ್ ಅರಸ್ ಉನ್ನತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಯ ವಾಕ್ ಶ್ರವಣ ವಿಭಾಗದ ವಾಕ್ ಮತ್ತು ಶ್ರವಣ ತಜ್ಞ ಡಾ.ಜಯರಾಂ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ವಿಶ್ವ ಶ್ರವಣ ದಿನ ಪ್ರಯುಕ್ತ ಶ್ರವಣ ಆರೋಗ್ಯ ಹಾಗೂ ಶ್ರವಣದೋಷ ಪರಿಹಾರಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ದೇಶಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶ್ರವಣ ದೋಷವಿರುವ ಆಗತಾನೆ ಜನಿಸಿದ ಮಕ್ಕಳಿಗೆ ಎಲ್ಲಾ ರೀತಿಯ ಉಚಿತವಾದ ತಪಾಸಣೆ ನಡೆಸಿ, ಸಮಸ್ಯೆ ಕಂಡು ಬಂದರೆ 3ರಿಂದ6ತಿಂಗಳ ನಂತರ ಅಂತಹ ಮಕ್ಕಳಿಗೆ ಶ್ರವಣ ಸಹಾಯಕ ಸಾಧನಗಳನ್ನು ನೀಡಿ ಪರಿಹಾರವನ್ನು ನಿಗಿಸಲಾಗುವುದು ಎಂದು ಹೇಳಿದರು.

ವಿಶ್ವ ಆರೋಗ್ಯ ಸಂಸ್ಥೆಯ ವತಿಯಿಂದ ಪ್ರತಿವರ್ಷ ಮಾರ್ಚ್ 3ರಂದು ವಿಶ್ವ ಶ್ರವಣ ದಿನವನ್ನು ಆಚರಿಸಲಾ ಗುವುದು. ಕಿವುಡುತನ ಹಾಗೂ ಶ್ರವಣ ಶಕ್ತಿಯ ಕುಗ್ಗುವಿಕೆಯನ್ನು ಹೇಗೆ ತಡೆಯಬೇಕೆಂಬ ಬಗ್ಗೆ, ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದೇ ಶ್ರವಣ ದಿನದ ಉದ್ದೇಶ. ಜೀವಿತದ ಎಲ್ಲ ಹಂತಗಳಲ್ಲಿ ವ್ಯಕ್ತಿಯೊಬ್ಬನಿಗೆ ಸರಿಯಾದ ಶ್ರವಣ ಶಕ್ತಿ ಇರಬೇಕು. ಆರೋಗ್ಯ ತಪಾಸಣೆಯ ಜತೆಗೆ ಸಾರ್ವಜನಿಕರು ಶ್ರವಣದೋಷದ ಪರೀಕ್ಷೆಯೂ ಮಾಡಿಸಬೇಕು. ಶ್ರವಣ ಶಕ್ತಿಯು ಕುಂದಿದವರು ಶ್ರವಣೋಪಕರಣಗಳ ಬಳಕೆಯ ವಿಚಾರದಲ್ಲಿ ಜಾಗರೂಕವಾಗಿ ತಿಳುವಳಿಕೆ ಪಡೆಯಬೇಕು ಎಂದು ನುಡಿದರು.

ಶ್ರೀ ದೇವರಾಜ್ ಅರಸ್ ಸಂಸ್ಥೆಯ ವಾಕ್ ಶ್ರವಣ ವಿಭಾಗದಲ್ಲಿ ಶ್ರವಣ ಪರೀಕ್ಷೆಯ ಸೌಲಭ್ಯ ಹಾಗೂ ಶ್ರವಣದೋಷಕ್ಕೆ ಪರಿಹಾರ ನೀಡಬಲ್ಲ ಎಲ್ಲಾ ಸೌಲಭ್ಯಗಳು ದೊರೆಯುತ್ತವೆ. ಸದ್ಯದಲ್ಲೇ ಕಿವಿಯ ಒಳಗೆ ಅಳವಡಿಸುವ ಸಾಧನ (ಕಾಕ್ಲಿಯಾರ್ ಇಂಪ್ಲಾಂಟ್) ಈ ಯೋಜನೆಯನ್ನೂ ಶುರುಮಾಡುವ ಪ್ರಯತ್ನ ನಡೆದಿದೆ. ಕೋಲಾರ ಜಿಲ್ಲೆಯ ಜನರು ಈ ಸೇವೆಗಳನ್ನು ಪಡೆಯಲು ಬೆಂಗಳೂರು ಅಥವಾ ಬೇರೆ ಕಡೆ ಹೋಗಬೇಕಾಗಿಲ್ಲ. ಜೊತೆಗೆ ಶ್ರವಣೋಪಕರಣಗಳನ್ನು ಶೇ.25 ರಿಯಾಯಿತಿ ದರದಲ್ಲಿ ನೀಡಲಾಗುತ್ತದೆ. ಇಲ್ಲಿನ ಜನರು ಈ ಎಲ್ಲಾ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು.

ಶ್ರವಣ ತಜ್ಞೆ ಡಾ.ಅಪೂರ್ವ ಮಾತನಾಡಿ, ಆರೋಗ್ಯವಂತ ವ್ಯಕ್ತಿಯ ಕಾರ್ಯಚಟುವಟಿಕೆಗಳಲ್ಲಿ ಶ್ರವಣ ಬಹಳಷ್ಟು ಪ್ರಮುಖವಾಗಿದ್ದು, ಶ್ರವಣ ದೋಷ ನಿವಾರಣೆ ನಿಟ್ಟಿನಲ್ಲಿ ವ್ಯಾಪಕ ಕ್ರಮಗಳ ಬಗ್ಗೆ ಅರಿವು, ಜಾಗೃತಿ ಅತೀ ಮುಖ್ಯವೆಂದು ಹೇಳಿದರು.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಜಗತ್ತಿನಲ್ಲಿ ಸುಮಾರು 46ಕೋಟಿ ಜನರಲ್ಲಿ ಶ್ರವಣ ದೋಷವಿದೆ. ಶ್ರವಣದೋಷವಿರುವ ಜನರ ಸಂಖ್ಯೆ 2030ರಷ್ಟರಲ್ಲಿ 63ಕೋಟಿಗೆ ಹಾಗೂ 2050ರಲ್ಲಿ 90ಕೋಟಿಗೆ ಬೆಳೆಯುವುದೆಂದು ಅಂದಾಜಿಸಲಾಗಿದೆ. ಅರಿವು ಪಡೆಯುವ ಮೂಲಕ ಕಿವಿ ಸಮಸ್ಯೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಬಹುದು ಎಂದರು.

ಯಾವುದೇ ವಸ್ತುವನ್ನು ಕಿವಿಯೊಳಗೆ ಹಾಕಬಾರದು. ಗದ್ದಲದ ಸ್ಥಳಗಳಲ್ಲಿ ಕಿವಿಕವಚವನ್ನು ಬಳಸಬೇಕು. ಕಿವಿಯಲ್ಲಿ ತೊಂದರೆ ಕಂಡುಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ. ನೀವು ತೆಗೆದುಕೊಳ್ಳುವ ಔಷಧಿಗಳು ನಿಮ್ಮ ಕಿವಿಯ ಮೇಲೆ ಪರಿಣಾಮ ಬೀಳುವುದೇ ಎಂದು ವೈದ್ಯರಿಂದ ತಿಳಿದುಕೊಳ್ಳಿ, ನೀವು ಕಿವಿಯ ಪರೀಕ್ಷೆಯನ್ನು ನಿಯಮಿತವಾಗಿ ಮಾಡಿಸಿಕೊಳ್ಳಿ, ಸೂಚಿಸಿದ ಶ್ರವಣ ಯಂತ್ರಗಳನ್ನೇ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ವಿ.ಮುನಿರಾಜು ಮಾತನಾಡಿ, ಇಂದಿನ ದಿನಗಳಲ್ಲಿ ಸಂವಹನವಿಲ್ಲದೆ ಜೀವನ ನಡೆಸಲು ಸಾಧ್ಯವಿಲ್ಲ. ಅದಕ್ಕಾಗಿ ಮೊಬೈಲ್ ಬಳಕೆ ಅಧಿಕವಾಗಿದೆ. ಅದರಲ್ಲಿಯೂ ಪತ್ರಕರ್ತರಿಗೆ ಮೊಬೈಲ್ ಅತ್ಯವಶ್ಯಕತೆ ಹುಟ್ಟಿದೆ. ಅವರೂ ಸುದ್ದಿ ಸಂಗ್ರಹಣೆಯಲ್ಲಿ ಬಳಕೆ ಮಾಡದೇಕಾಗಿರುತ್ತದೆ. ಮೊಬೈಲ್ ಬಳಸುವುದರಿಂದ ಕಿವುಡಾಗುವ ಸಂಭವವಿರುವುದರಿಂದ ಪತ್ರಕರ್ತರಿಗೆ ನಿಮ್ಮ ವಾಕ್ ಮತ್ತು ಶ್ರವಣ ವಿಭಾಗದಿಂದ ಎಲ್ಲಾ ರೀತಿಯ ಉಚಿತವಾದ ತಪಾಸಣೆಯನ್ನು ನಡೆಸಿ, ಅವರ ಕೆಲಸಕ್ಕೆ ಕೈ ಜೋಡಿಸಿ ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಶ್ರವಣ ತಜ್ಞ ಡಾ.ಅಭಿಜಿತ್ ಇದ್ದರು.